ಹದಿನೈದಿಪ್ಪತ್ತು ರೂಮುಗಳ ದೊಡ್ಡ ತಾರಸಿ ಬಿಲ್ಡಿಂಗ್ ಆಗಿಬಿಟ್ಟಿದೆ! ಅವೊತ್ತು ಬರಿ ಪ್ರೈಮರಿ ಸ್ಕೂಲ್ ಆಗಿದ್ದಿದ್ದು ಇವೊತ್ತು ಪಿಯುಸಿ ಕಾಲೇಜುವರೆಗೂ ಬೆಳೆದುಬಿಟ್ಟಿತ್ತು!!

ಸ್ಕೂಲು ಕಾಂಪೌಂಡ್ ಪ್ರವೇಶಿಸುತ್ತಿದ್ದಂತೆ ಎಂಥದ್ದೋ ಭಯಭೀತಿ ಮೈನೊಳಕ್ಕೆ ನುಗ್ಗಿದಂತಾಗಿತ್ತು. ಎದುರಿಗೆ ಬಂದ ಸುಮಾರು ಐವತ್ತು ವರ್ಷ ಮೇಲ್ಪಟ್ಟ ವ್ಯಕ್ತಿಯೊಬ್ಬರು ''ಏನ್ ಬುಡೇನ್ ಸಾಬರೇ ಈ ಕಡೆ'' ಎಂದು ಪ್ರಶ್ನಿಸಿದ್ದರು. ''ನೀವು...'' ತಡವರಿಸಿದ ಬುಡೇನ್ ಸಾಬಿ. ''ನಾನು ತಿಮ್ಮಯ್ಯ ಮೇಷ್ಟ್ರ ಮಗ ವಿಜಯಣ್ಣ. ಇಲ್ಲೆ ಪಿಟಿ ಮೇಷ್ಟ್ರ ಆಗಿದ್ದೀನಿ. ನಿಮ್ಮಪ್ಪ ನಮ್ಮಜ್ಜಿಗೆ ಕಡ್ಡಿಪುಡಿ ಕೊಡೋಕೆ ತಿಂಗಳಿಗೊಂದು ಸಾರಿನಾದ್ರೂ ಬರೋನು. ನಮ್ಮಜ್ಜಿ ಈಗ್ಲೂ ಆಗಾಗ ಜ್ಞಾಪಿಸಿಕೊಳ್ತಾಳೆ...'' ಪರಿಚಯ ಹೇಳಿದ್ದರು ವಿಜಯಣ್ಣ ಮೇಷ್ಟ್ರು.

''ಸಾ ನಂಗೊಂದು ಬರ್ತ್ ಸರ್ಟಿಫಿಕೇಟ್ ಬೇಕಿತ್ತು...'' ಸಡನ್ನಾಗಿ ವಿಷಯಕ್ಕೆ ಬಂದಿದ್ದ ಬುಡೇನ್.

''ಯಾರದ್ದು...'' ಕೇಳಿದ್ದರು ಮೇಷ್ಟ್ರು.

''ನಂದೇನೇ ಸಾ...'' ಬುಡೇನ್ ಸಾಬಿ ಮೇಷ್ಟ್ರನ್ನು ದಿಟ್ಟಿಸಿ ನೋಡಿದ್ದ.

''ಏನ್ಸಾಬ್ರೆ ತಮಾಷೆ ಮಾಡ್ತಿದ್ದೀರಾ. ಯಾವೊರ್ಷ ಏಳನೇ ಕ್ಲಾಸು ಪಾಸುಮಾಡಿದ್ದು...'' ಎಂದು ನಕ್ಕಿದ್ದರು.

''ಸಾ ನಾನೆರಡೇ ತಿಂಗಳು ಇಸ್ಕೂಲಿಗೆ ಬಂದಿದ್ದು. ಅಷ್ಟ್ರಾಗೆ ಅಪ್ಪ ಅಮ್ಮ ಕಲ್ಯಾಣಿ ಬಸ್ ಗುದ್ದಿ ಸತ್ತೋದ್ರು. ನಾನು ಸ್ಕೂಲ್ ನಿಲ್ಲಿಸಿಬಿಟ್ಟೆ...'' ಎರಡೇ ಮಾತುಗಳಲ್ಲಿ ಇತಿಹಾಸ ಬಿಚ್ಚಿಟ್ಟಿದ್ದ ಬುಡೇನ್.

''ಸಾಬ್ರೆ ಎಂಟೊರ್ಷದ ಹಿಂದಿನ ಯಾವ ರೆಕಾರ್ಡುಗಳು ಈಗ ಸಿಗಲ್ಲ. ಇನ್ನ ನಲವತ್ತೈದು, ಐವತ್ತು ವರ್ಷಗಳ ಹಿಂದಿನ ರೆಕಾರ್ಡುಗಳು ಗಾಂಧಿತಾತನ ಜೊತೆಗೆ ಸ್ವರ್ಗ ಸೇರ್ಕಂಡಿರ್ತಾವೆ. ಅದರ ಚಿಂತೆ ಬಿಟ್ಬಿಡಿ...'' ಎಂದು ಬುಡೇನ್ ಸಾಬಿಯ ಆಸೆಯ ಎಳೆಯನ್ನು ಕಚಕ್ಕನೆ ಕತ್ತರಿಸಿ ಹಾಕಿ ಮುಂದೆ ನಡೆದಿದ್ದರು ಮೇಷ್ಟ್ರು. ಬುಡೇನ್ ಸಾಬಿಯು ದವಡೆ ಎಗರಾಕಿಕೊಂಡು ಮನೆಯ ಕಡೆ ನಡೆದಿದ್ದ. ನಡೆಯುವಾಗ ದಾರಿಯಲ್ಲಿ ಬ್ಯಾಂಕ್ ನೋಡಿ ಬುಡೇನ್ ಸಾಬಿಯ ಮೆದುಳಿಗೆ ಅನೇಕ ವರ್ಷಗಳ ಹಿಂದೆ ಇಪ್ಪತ್ತು ಸಾವಿರ ಇಟ್ಟ ಸಂಗತಿ ನೆನಪಾಗಿ ವಿಪರೀತವಾಗಿ ಗೆಲುವಾದ.

ಸೀದಾ ಅತಾವುಲ್ಲಾನ ಮನೆಗೆ ನಡೆದ ಬುಡೇನ್ ಸಾಬಿ ಅತಾವುಲ್ಲಾನ ಹತ್ತಿರ ''ಅರೆ, ಯಾವ್ ಸರ್ಟಿಫಿಕೇಟೂ ಬೇಡ ನಡ್ಯೊ ಅತಾವುಲ್ಲಾ. ಬ್ಯಾಂಕಿನಾಗೆ ತುಂಬಾ ಹಿಂದೆ ಇಪ್ಪತ್ತು ಸಾವಿರ ಇಟ್ಟಿದ್ದು ಜ್ಞಾಪಕ ಇದ್ಯಾ... ಅದುನ್ನೆ ಬಿಡಿಸ್ಕಂಡು ಬೆಂಗಳ್ಳೂರ್ ವಿಕ್ಟೋರಿಯಾಗೆ ಹೋಗಾನ...'' ಎಂದಿದ್ದ. ಅತಾವುಲ್ಲಾನಿಗೂ ಅದು ನೆನಪಾಗಿ ''ಅರೆ, ಇಸ್ಕಿ ಅವ್ವಲ್ಲೊ. ಅಲ್ಲಾಹು ದೊಡ್ಡೋನು...'' ಎಂದು ಸಂಭ್ರಮಗೊಂಡ. ಅತಾವುಲ್ಲಾನಿಗೆ ಬ್ಯಾಂಕ್ ಮೇನೇಜರ್ ನರಸರೆಡ್ಡಿ ಚೆನ್ನಾಗಿ ಪರಿಚಯವಿದ್ದ. ಹಳೆಯ ಅಕೌಂಟ್ ಹುಡುಕಿ ಲೆಕ್ಕ ಹಾಕಿದಾಗ ಇಪ್ಪತ್ತು ವರ್ಷಗಳಲ್ಲಿ ಬಡ್ಡಿಯೂ ಸೇರಿ ಇಪ್ಪತ್ತೆಂಟು ಸಾವಿರ ಆಗಿತ್ತು. ಎಲ್ಲಾ ರೆಡಿ ಮಾಡಿ ದುಡ್ಡು ಕೊಡುವ ಹೊತ್ತಿಗೆ ಎರಡು ಗಂಟೆಗಳನ್ನು ತೆಗೆದುಕೊಂಡಿದ್ದ ಬ್ಯಾಂಕಿನ ಕ್ಲರ್ಕ್.

ಮರುದಿನ ಬೆಂಗಳೂರಿಗೆ ಹೋಗಲು ತೀರ್ಮಾನಿಸಿದ್ದರು. ಬಲವಂತವಾಗಿ ಅತಾವುಲ್ಲಾನ ಕೈಗೆ ಸಾವಿರ ಇಟ್ಟು ರಾತ್ರಿಗೆ ಬಿರಿಯಾನಿ ಮಾಡಿಸಲು ಹೇಳಿದ್ದ. ರಾತ್ರಿ ಒಂದು ಕ್ವಾರ್ಟರ್ ಹೆರಿಕ್ಯುಲೆಸ್ ಬ್ರಾಂದಿ ಕುಡಿದು ಸುಮಾರು ಬಿರಿಯಾನಿ ತಿಂದು ಮಲಗಿದ ಬುಡೇನ್ ಸಾಬಿ. ಒಂದು ಹೊತ್ತಿನಲ್ಲಿ ಒಂದು ಕನಸು ಬಿದ್ದಿತ್ತು. ಅದೊಂದು ದೊಡ್ಡ ಜಾತ್ರೆ. ಮೂರ್ನಾಲ್ಕು ಸಾವಿರ ಜನ ನೆರೆದಿದ್ದಾರೆ. ಎತ್ತರದ ಸ್ಟೇಜ್ ಮೇಲೆ ನಿಂತು ಬುಡೇನ್ ಸಾಬಿ ದೊಡ್ಡ ಕೀಲುಗೊಂಬೆಯನ್ನು ಆಡಿಸುತ್ತಿದ್ದಾನೆ. ಜನ ಕೇಕೆ ಹಾಕುತ್ತಿದ್ದಾರೆ, ಶಿಳ್ಳೆ ಹೊಡೆಯುತ್ತಿದ್ದಾರೆ. ಮುಂದೆ ಅಪ್ಪ, ಅಮ್ಮ, ಅಜ್ಜಿ ಎಲ್ಲರೂ ಕುಳಿತಿದ್ದಾರೆ. ಎಂಎಲ್ಎ ಬಂದು ದೊಡ್ಡ ಮಲ್ಲಿಗೆ ಹೂವಿನ ಹಾರ ಹಾಕುತ್ತಾರೆ. ಹೂವಿನ ಹಾರದ ತುಂಬಾ